

# ಬಾಲಾಕೋಟ್ ದಾಳಿ ಅಭಿನಂದನ್ ನಗು

18

ದೇಶದ ಆಂತರಿಕ ಭದ್ರತೆ ಮತ್ತು ಗಡಿ ರಕ್ಷಣೆ ವಿಚಾರದಲ್ಲಿಯೂ 2019 ಮಹತ್ವದ ವರ್ಷ. ಹಲವು ವರ್ಷಗಳಿಂದ ಬಾಕಿಯಿದ್ದ ಹಲವು ಸೇನಾ ಸಹಕಾರ ಮತ್ತು ರಕ್ಷಣಾ ಉಪಕರಣಗಳ ಖರೀದಿ ಒಪ್ಪಂದಗಳು ಈ ವರ್ಷದಲ್ಲಿ ಅಸ್ತಿತ್ವಕ್ಕೆ ಬಂದವು.

ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಸಮೀಪ ಫೆ.14ರಂದು ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಸಿಬ್ಬಂದಿಯಿದ್ದ ಬಸ್ ಮೇಲೆ ಆತ್ಮಾಹುತಿ ದಾಳಿ ನಡೆಸಿದ ಉಗ್ರನೊಬ್ಬ ಬಸ್ ಸ್ಫೋಟಿಸಿದ. ಈ ದಾಳಿಯಲ್ಲಿ 40 ಯೋಧರು ಹುತಾತ್ಮರಾದರು. ಇದಕ್ಕೆ ಪ್ರತಿಕಾರವಾಗಿ ಭಾರತೀಯ ವಾಯುಪಡೆಯ ಯುದ್ಧವಿಮಾನಗಳು ಫೆ.26ರಂದು ಪಾಕಿಸ್ತಾನದ ಬಾಲಾಕೋಟ್‌ನಲ್ಲಿದ್ದ ಉಗ್ರರ ಶಿಬಿರಗಳ ಮೇಲೆ ಸರ್ಜಿಕಲ್ ಸ್ಟ್ರೈಕ್ ನಡೆಸಿ ಭಾರತಕ್ಕೆ ನುಸುಳಲು ಸಿದ್ಧರಾಗಿದ್ದ ಉಗ್ರರನ್ನು ಕೊಂದುಹಾಕಿದವು.

ಭಾರತದ ಸೇನಾನೆಲೆಗಳ ಮೇಲೆ ದಾಳಿ ನಡೆಸುವ ಉದ್ದೇಶದಿಂದ ಫೆ.27ರಂದು ಪಾಕ್ ವಾಯುಪಡೆ ವ್ಯೂಹ ರಚಿಸಿಕೊಂಡು ಭಾರತದ ವಾಯುಗಡಿ ಉಲ್ಲಂಘಿಸಿತು. ಪಾಕ್ ಯುದ್ಧವಿಮಾನಗಳನ್ನು ಹಿಮ್ಮೆಟ್ಟಿಸುವ ಹೋರಾಟದಲ್ಲಿ ಭಾರತೀಯ ವಾಯುಪಡೆಯ ಮಿಗ್–21 ಬೈಸನ್ ಮತ್ತು ಪಾಕ್ ವಾಯುಪಡೆಯ ಎಫ್16 ಯುದ್ಧ ವಿಮಾನಗಳ ನಡುವೆ ಡಾಗ್‌ಫೈಟ್ ನಡೆದು, ಭಾರತದ ಪೈಲಟ್ ಅಭಿನಂದನ್ ವರ್ಧಮಾನ್ ಇದ್ದ ವಿಮಾನ ಪತನಗೊಂಡಿತು.

ವಿಮಾನದಿಂದ ಸುರಕ್ಷಿತವಾಗಿ ಎಜೆಕ್ಟ್ ಆದ ಅಭಿನಂದನ್ ಮುಟ್ಟಿದ ನೆಲೆ ಪಾಕಿಸ್ತಾನದ್ದಾಗಿತ್ತು. ಅಲ್ಲಿನ ಜನರಿಂದ ಹೊಡೆತ ತಿಂದು, ಸೇನೆಯ ಬಂಧನದಲ್ಲಿದ್ದ ಅಭಿನಂದನ್ ಅವರನ್ನು ಭಾರತ ಸರ್ಕಾರವು ಅವಿರತ ರಾಜತಾಂತ್ರಿಕ ಪರಿಶ್ರಮದ ಮೂಲಕ ಕೇವಲ 60 ಗಂಟೆಗಳಲ್ಲಿ ಮಾತೃಭೂಮಿಗೆ ವಾಪಸ್ ಕರೆತಂದಿತು. ಬಂಧನದಲ್ಲಿದ್ದ ಅವಧಿಯಲ್ಲಿ ಅಭಿನಂದನ್ ತೋರಿದ ಸ್ಥೈರ್ಯ, ಪಾಕ್ ಸೇನೆಗೆ 'ಥ್ಯಾಂಕ್ಯು ಫಾರ್ ವಂಡರ್‌ಫುಲ್ ಟೀ' ಎಂದ ಆತ್ಮವಿಶ್ವಾಸದ ಮಾತು, ಹುರಿಗೊಳಿಸಿದ ಗಿರಿಜಾ ಮೀಸೆ ದೇಶದಲ್ಲಿ ಹೊಸ ಟ್ರೆಂಡ್ ಹುಟ್ಟುಹಾಕಿತು.

# ರಕ್ಷಣಾ ವ್ಯವಸ್ಥೆಯ ಮೈಲಿಗಲ್ಲುಗಳು

19

### ಉಪಗ್ರಹ ನಿರೋಧಕ ಕ್ಷಿಪಣಿ ಪರೀಕ್ಷೆ

ಮಾರ್ಚ್ 27ರಂದು ಒಡಿಶಾ ಸಮುದ್ರ ತೀರದಿಂದ ಖಂಡಾಂತರ ಕ್ಷಿಪಣಿ ಉಡಾಯಿಸಿದ ಭಾರತ, ಅಂತರಿಕ್ಷದಲ್ಲಿದ್ದ ತನ್ನದೇ ಹಳೇ ಉಪಗ್ರಹವೊಂದನ್ನು ಸ್ಫೋಟಿಸಿ ಜಗತ್ತಿನ ಗಮನ ಸೆಳೆಯಿತು. ಈವರೆಗೆ ಇಂಥ ಸಾಮರ್ಥ್ಯ ಪ್ರದರ್ಶಿಸಿದ್ದ ಅಮೆರಿಕ, ರಷ್ಯಾ ಮತ್ತು ಚೀನಾಗಳ ಸಾಲಿನಲ್ಲಿ ಭಾರತವೂ ಸ್ಥಾನ ಪಡೆಯಿತು. ಅಂತರಿಕ್ಷದಲ್ಲಿಯೂ ಹಿತಾಸಕ್ತಿ ರಕ್ಷಿಸಿಕೊಳ್ಳುವ ಸಾಮರ್ಥ್ಯ ತನಗಿದೆ ಎಂದು ಸಾರಿ ಹೇಳುವುದು ಈ ಪರೀಕ್ಷೆಯ ಉದ್ದೇಶವಾಗಿತ್ತು.

### ಎಸ್-400 ಕ್ಷಿಪಣಿ ರಕ್ಷಣಾ ವ್ಯವಸ್ಥೆ

ರಷ್ಯಾದೊಂದಿಗೆ ₹ 40 ಸಾವಿರ ಕೋಟಿ ಮೊತ್ತದ ಎಸ್–400 ವಾಯು ರಕ್ಷಣಾ ವ್ಯವಸ್ಥೆ ಖರೀದಿಗೆ ಭಾರತ ಮಾಡಿಕೊಂಡಿದ್ದ ಒಪ್ಪಂದಕ್ಕೆ ಅಮೆರಿಕ ಕಣ್ಣು ಕೆಂಪಾಗಿಸಿಕೊಂಡಿತ್ತು. ಅಮೆರಿಕ ಆಕ್ಷೇಪವನ್ನು ನಾಜೂಕಾಗಿ ನಿರ್ವಹಿಸಿ ಎಸ್–400 ಖರೀದಿಗೆ ಮುಂದಿನ ಹೆಜ್ಜೆಯಿಟ್ಟಿದ್ದು ಈ ವರ್ಷದ ಗಮನಾರ್ಹ ಸಾಧನೆ. ಸುಮಾರು 400 ಕಿ.ಮೀ. ಅಂತರ ಮತ್ತು 30 ಕಿ.ಮೀ. ಎತ್ತರದಲ್ಲಿ ಹಾರಿಬರುವ ಶತ್ರುದೇಶದ ವಿಮಾನ, ಕ್ರೂಸ್ ಮತ್ತು ಖಂಡಾಂತರ ಕ್ಷಿಪಣಿಗಳನ್ನು ಹೊಡೆದುರುಳಿಸುವ ಸಾಮರ್ಥ್ಯವಿರುವ ಎಸ್–400 ವ್ಯವಸ್ಥೆ ಯುದ್ಧಗಳ ದಿಕ್ಕು ಬದಲಿಸಬಲ್ಲದು.

### ರಫೇಲ್ ಡೀಲ್

ಭಾರತೀಯ ವಾಯುಪಡೆಗೆ ರಫೇಲ್ ಯುದ್ಧ ವಿಮಾನಗಳ ಸೇರ್ಪಡೆ ಪ್ರಕ್ರಿಯೆ ಆರಂಭವಾದ ವರ್ಷವಿದು. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸ್ವತಃ ಪ್ಯಾರಿಸ್‌ಗೆ ತೆರಳಿ ರಫೇಲ್ ವಿಮಾನಕ್ಕೆ 'ಶಸ್ತ್ರಪೂಜೆ' ನೆರವೇರಿಸಿದರು. ಒಪ್ಪಂದದಲ್ಲಿ ಅಕ್ರಮಗಳು ನಡೆದಿವೆ, ಸಿಬಿಐ ತನಿಖೆ ನಡೆಯಬೇಕು ಎಂದು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿದ್ದಲ್ಲದೆ, 'ಚೌಕಿದಾರ್ ಚೋರ್ ಹೈ' ಎಂದಿದ್ದ ರಾಹುಲ್ ಗಾಂಧಿಗೆ ಎಚ್ಚರಿಕೆಯನ್ನೂ ನೀಡಿತು. ಬೋಫೋರ್ಸ್ ಹಗರಣದಂತೆ ರಫೇಲ್ ಒಪ್ಪಂದವನ್ನು ಚುನಾವಣೆ ವಿಷಯವಾಗಿಸಿ ಲಾಭ ಪಡೆಯುವ ವಿರೋಧ ಪಕ್ಷಗಳ ಪ್ರಯತ್ನ ಯಶಸ್ವಿಯಾಗಲಿಲ್ಲ.

### ನೀಲಿ ಕಡಲ ನೌಕಾಪಡೆ

ಈ ಬಾರಿ ಅಧಿಕೃತವಾಗಿ ನಮ್ಮ ನೌಕಾಪಡೆ 'ನೀಲ ಕಡಲ ದೊಡ್ಡ ಶಕ್ತಿ' (formidable blue water force) ಎಂದು ಘೋಷಿಸಿಕೊಂಡಿತು. ಗಡಿಗಳಿಂದ ಅತಿದೂರದ ಪ್ರದೇಶದಲ್ಲಿಯೂ ಭಾರತದ ಹಿತಾಸಕ್ತಿ ರಕ್ಷಿಸುವ, ಶತ್ರುದೇಶದ ನೌಕಾಯಾನ, ಬಂದರು ಬಳಕೆಗೆ ನಿರ್ಬಂಧ ಹೇರುವ ಸಾಮರ್ಥ್ಯ ತನಗಿದೆ ಎಂದು ಬಿಂಬಿಸಿಕೊಂಡಿತು. ಕೆಲ ಸಬ್‌ಮರೀನ್ ಮತ್ತು ಯುದ್ಧನೌಕೆಗಳು ಈ ವರ್ಷ ಕಡಲಿಗೆ ಇಳಿದವು.



**ಪ್ರತಿಕ್ರಿಯಿಸಿ**

ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ.
ಇ–ಮೇಲ್: feedback@sudha.co.in